Sri J. P. SARWESH.—I have myself seen the file. The patwari is demanding about 200 rupees which Mr. Ashappa is not able to give and the mutation entry has been done in such a manner which is not at all beneficial to the applicant. How can the loan be sanctioned when there is no name on the record of rights, Sir ?

Sri H. V. KOUJALGI.—Sir, on the strength of the application presented by the hon'ble Member, an spot enquiry was conducted and mutation was done according to law and necessary orders were passed by the Tahsildar.

Allocation of Funds for Small Scale Industries

539. Sri H. B. JWALANAIAH (Hassan).—

Will the Minister for Industries, Information and Publicity be pleased to state :—

the total outlay for Small Scale Industries in IV Five Year Plan and the programme drawn up in that behalf ?

Sri A. P. APPANNA (Deputy Minister for Industries):—

A total plan outlay of Rs. 375.00 lakhs has been provided to the Small Scale Industries schemes under the IV Five Year Plan. Programmes drawn up are as follows :

(1) Model Carpentry and Smithy Centre.
(2) Leather Common Facility Centres.
(3) Strengthening the staff of Joint Director's Office and Statistical Section.
(4) Small Scale Industries in the C. D. and N. E. S. Areas.
(5) Pottery Centre, Madikebeedu.
(6) Craft Co-operative Societies.
(7) Loan to Small Scale industries (Block Loans).
(8) Grant-in-aid to Mysore Small Industries Corporation.
(9) Common Facility Centres in Industrial Estates.
(10) Quality Marking Scheme.
(11) Manufacture of Roofing Tiles, Bagepalli.
(12) Setting up of Testing Laboratory Tool Room for Small Scale Industries (Electronic and Electric Testing Laboratory).
(13) General Purpose workshop.
(14) Mechanised Brick Plant.

ಶ್ರೀ ಎಚ್. ಬಿ. ಜ್ವಾಲನಯ್ಯ.—ಮುಖ್ಯ ಮಂತ್ರಿಗಳು ಮೈಸೂರು ಇಂಡಸ್ಟ್ರಿಯಲ್ ಕೋಆಪರೇಟೀವ್ ಬ್ಯಾಂಕಿನ ಒಂದು ಸಭೆಯಲ್ಲಿ ಸುಮಾರು 14 ಕೋಟಿ ರೂಪಾಯಿಗಳನ್ನು ಸಣ್ಣ ಕೈಗಾರಿಕೆಗಳಿಗೆ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕೊಡುವುದಾಗಿ ಹೇಳಿದ್ದರು. ಈಗ ಅವರು ಹೇಳಿದ್ದರಲ್ಲಿ ಮುಕ್ಕಾಲು ಪರ್ಸೆಂಟಿಗಿಂತ ಕಡಮೆ ಹಣ ಒದಗಿಸಿರುವುದರಿಂದ ಇದನ್ನು ಪರಿಶೀಲಿಸುತ್ತೀರಾ ?

† ಶ್ರೀ ಎ. ಪಿ. ಅಪ್ಪಣ್ಣ.—14 ಕೋಟಿಯನ್ನು ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್, ಎಲೆಕ್ಟ್ರಿಸಿಟಿ ಇಂಡಸ್ಟ್ರೀಸ್ ಹ್ಯಾಂಡಿಕ್ರಾಫ್ಟ್ಸ್‌ಗೆ ಕೊಟ್ಟಿರುವುದು ನಿಜ.

ಶ್ರೀ ಎಚ್. ಬಿ. ಜ್ವಾಲನಯ್ಯ.—ಇಲ್ಲಿ 14 ಐಟಂ ಇವೆ. 375 ಲಕ್ಷ ರೂಪಾಯಿಗಳನ್ನು ಯಾವ ರೀತಿ ಹಂಚಲಾಗುವುದು ? ದೊಡ್ಡ ಕೈಗಾರಿಕೆಗಳಿಗೆ ಹೆಚ್ಚು ಸಹಾಯ ಮಾಡುವುದಕ್ಕಿಂತ ಸಣ್ಣ ಕೈಗಾರಿಕೆಗಳಿಗೆ ಹೆಚ್ಚು ಸಹಾಯ ಮಾಡುವುದು ಸೂಕ್ತವಲ್ಲವೇ ?

ಶ್ರೀ ಎ. ಪಿ. ಅಪ್ಪಣ್ಣ.—375 ಲಕ್ಷದಲ್ಲಿ ಸುಮಾರು 125 ಲಕ್ಷ ಸಾಲ ಮತ್ತು ಕೆಲವು ಭಾಗ ಗ್ರಾಂಟ್ ಇನ್ ಏಡ್ ಇದೆ. ಕಾರ್ಪೆಂಟ್ರಿ, ಸ್ಮಿತಿ ಮತ್ತು ಟೈಲರಿಂಗ್ ಪ್ರೋಗ್ರಾಂಗೆ ನಾಲ್ಕನೆಯ ಯೋಜನೆಯಲ್ಲಿ ಕಡಮೆ ಒದಗಿಸಿದೆ.

ಶ್ರೀ ಎಂ. ಎಸ್. ಕೃಷ್ಣನ್.—ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಒಟ್ಟು ಮೆಚ್ಚ 375 ಲಕ್ಷ ಎಂದು ಹೇಳಿದೆ. ಈಗ ಪ್ರತಿ ವರ್ಷ ಒಂದು ಯೋಜನೆ ಮಾಡುತ್ತಿರುವುದರಿಂದ ಇದರಲ್ಲಿ ಸ್ಮಾಲ್ ಸ್ಕೇರ್ ಇಂಡಸ್ಟ್ರೀಸ್ ಸ್ಥಾನವೇನು ? ಇದಕ್ಕೆ ಎಷ್ಟು ಪಾಟ್‌ಲೇ ಮಾಡಿರುವುದು ?

ಶ್ರೀ ಎ. ಪಿ. ಅಪ್ಪಣ್ಣ.—1969-70 ರಲ್ಲಿ 90 ಲಕ್ಷ ಕೊಟ್ಟಿದೆ.

Restoration of Doddakere Tank

544. Sri K. P. CHIKKEGOWDA (Sakaleshpur).—

Will the Minister of State for Minor Irrigation be pleased to state :—

(*a*) the date and the amount of estimated cost of restoration of Doddakere of Gangara (Major tank) of Kundur Hobli, Alur Taluk (Hassan District) ;

(*b*) the circumstances that led for its delay in execution ?

Sri D. PARAMESHWARAPPA (Deputy Minister for Major Irrigation) [On behalf of SRI A. J. DODDAMETI (Minister of State for Minor Irrigation)].—

(*a*) An estimate amounting to Rs. 25,000 is prepared now.

(*b*) Does not arise *vide* reply to (*a*).

2-00 P.M.

ಶ್ರೀ ಕೆ. ಪಿ. ಚಿಕ್ಕೇಗೌಡ.—ಅಂದಾಜನ್ನು ತಯಾರು ಮಾಡುವುದಕ್ಕೆ ಎರಡು ವರ್ಷಗಳ ಕಾಲ ಆಯಿತು ಇನ್ನು ಮುಂಜೂರು ಮಾಡುವುದಕ್ಕೆ ಎಷ್ಟು ವರ್ಷಕಾಲ ಬೇಕಾಗುತ್ತದೆ ?

† ಶ್ರೀ ಡಿ. ಪರಮೇಶ್ವರಪ್ಪ.—ಅಂದಾಜು ತಯಾರು ಮಾಡುವುದಕ್ಕೆ ಎರಡು ವರ್ಷ ಹಿಡಿದಿದೆ ಎಂದು ನಾವೇನೂ ಹೇಳಿಲ್ಲ. ಇತ್ತೀಚೆಗೆ ಇನ್‌ವೆಸ್ಟಿಗೇಷನ್ ಆಗಿ ಆ ಅಂದಾಜು ಪರಿಶೀಲನೆಯಲ್ಲಿ ಇದೆ ಎಂಬುದನ್ನು ಹೇಳಿದ್ದೇವೆ, ಅದನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರದಲ್ಲಿರತಕ್ಕ ಆರ್ಥಿಕ ಪರಿಸ್ಥಿತಿಯ ಮೇಲೆ ಅದು ಅನ್ವಯವಾಗುತ್ತದೆ. ಇದು ಮುಖ್ಯವಾದ ಕೆರೆ ಎಂದು ಹೇಳುತ್ತಾ ಇದ್ದಾರೆ, ಜಾಗ್ರತೆ ತೆಗೆದುಕೊಳ್ಳುವುದಕ್ಕೆ ತಕ್ಕ ಕ್ರಮ ತೆಗೆದುಕೊಳ್ಳುತ್ತೇವೆ.